

ತೊಂಬತ್ತರ ದಶಕ. ಬೆಂಗಳೂರಿನಲ್ಲಿ ಪರಿಚಯಸ್ಥರೊಬ್ಬರು ಟೈಪ್–1 ಮಧುಮೇಹದಿಂದ ಬಳಲುತ್ತಿದ್ದರು.

ರಕ್ತದಲ್ಲಿರುವ ಸಕ್ಕರೆ ಅಂಶದ ತಪಾಸಣೆಗೆಂದು ಪದೇ ಪದೇ ಪ್ರಯೋಗಾಲಯಕ್ಕೆ ಎಡತಾಕುವ ತಾಪತ್ರಯದಿಂದ ತಪ್ಪಿಸಿಕೊಳ್ಳಲು ಅಮೆರಿಕದಲ್ಲಿ ನೆಲೆಸಿದ್ದ ತಮ್ಮ ಸಂಬಂಧಿಕರಿಂದ 'ಗ್ಲುಕೋಮೀಟರ್' ಎಂಬ ಅದ್ಭುತ ಸಾಧನವನ್ನು ತರಿಸಿಕೊಂಡರು. ರಕ್ತದಲ್ಲಿರುವ ಸಕ್ಕರೆ ಅಂಶದ ತಪಾಸಣೆ ಬೆರಳ ತುದಿಗೇ ನಿಲುಕುವಷ್ಟು ಸುಲಭವಾಯ್ತು. ನಿಶ್ಚಿಂತೆಯಿಂದ ಮನೆಯೊಳಗೇ ಕುಳಿತು ಬೇಕಾದಾಗಲೆಲ್ಲ ಕನಿಷ್ಠ ನೋವಿನೊಂದಿಗೆ ರಕ್ತ ತೆಗೆದು, ಕೆಲವೇ ಸೆಕೆಂಡುಗಳಲ್ಲಿ ಫಲಿತಾಂಶ ನೋಡಿಕೊಳ್ಳುವ ಈ ಗ್ಲುಕೋಮೀಟರ್ ಅವರಿಗೆ ಮಾಯಾದೀಪದಂತೆ ಅನಿಸಿದ್ದು ಸುಳ್ಳಲ್ಲ.

ಸರಿ, ಆದರೆ ಮೀಟರ್ ಜೊತೆಗಿದ್ದ ಟೆಸ್ಟಿಂಗ್ ಸ್ಟ್ರಿಪ್‌ಗಳು 4–5 ತಿಂಗಳಲ್ಲೇ ತೀರಿಹೋದಾಗ ಮತ್ತೆ ಪ್ರಯೋಗಾಲಯಕ್ಕೆ ಭೇಟಿ ಕೊಡಬೇಕಾದ ಪರಿಸ್ಥಿತಿ ಆ ವೃದ್ಧರಿಗೆ. ದುಬಾರಿ ಸ್ಟ್ರಿಪ್‌ಗಳು. ಜೊತೆಗೆ ಆ ಕಾಲದಲ್ಲಿ ಅಮೆರಿಕಾದಿಂದ ತರಿಸಿಕೊಳ್ಳುವುದೆಂದರೆ ಸಪ್ತ ಸಾಗರವನ್ನು ದಾಟಿದಷ್ಟು ಕಷ್ಟ.

ಆದರೆ 20– 25 ವರ್ಷಗಳಷ್ಟು ಹಿಂದೆ ಇದ್ದಂತಹ ಪರಿಸ್ಥಿತಿ ಈಗಿಲ್ಲ. ಗ್ಲುಕೋಮೀಟರ್‌ಗಳನ್ನು ಹುಡುಕಿಕೊಂಡು ಅಲೆಯಬೇಕಾದ ಅವಶ್ಯಕತೆ ಇಲ್ಲ. ದುಬಾರಿ ಬೆಲೆಯನ್ನು ತೆತ್ತು ಅಮೂಲ್ಯ ವಸ್ತುವಿನಂತೆ ಕಾಪಿಡಬೇಕಾದ ಅಗತ್ಯವೂ ಇಲ್ಲ. ಮನೆಯ ಪಕ್ಕದ ಔಷಧ ಅಂಗಡಿಯಲ್ಲೇ ಸಸ್ತಾ ಬೆಲೆಗೆ ಬೇರೆ ಬೇರೆ ಬ್ರ್ಯಾಂಡ್‌ಗಳು ಸಿಗುತ್ತವೆ. ಅದಕ್ಕೂ ಕಡಿಮೆ ಬೆಲೆಗೆ ಬೇಕಾ? ಆನ್‌ಲೈನ್ ಷಾಪ್‌ಗಳಲ್ಲಿ ಸ್ಪರ್ಧಾತ್ಮಕ ದರಕ್ಕೆ ಶೀಘ್ರ ನಿಮ್ಮ ಮನೆ ಬಾಗಿಲಿಗೇ ಬಂದುಬಿಡುತ್ತದೆ. ಟೆಸ್ಟಿಂಗ್ ಸ್ಟ್ರಿಪ್‌ಗಳೂ ಅಷ್ಟೆ. ಪಕ್ಕದ ಅಂಗಡಿಯವನೇ ಆನ್‌ಲೈನ್ ಮಾರಾಟ  ಸಂಸ್ಥೆಯಲ್ಲಿ ಹೆಸರು ನೋಂದಾಯಿಸಿಕೊಂಡು ಅಂಗಡಿಯಲ್ಲಿ ಮಾರುವ ಬೆಲೆಯ ಅರ್ಧದಷ್ಟು ಬೆಲೆಗೆ ಅಲ್ಲಿ ಮಾರಾಟಕ್ಕೆ ಇಟ್ಟಿರುತ್ತಾನೆ.

ಅಧಿಕ ರಕ್ತದೊತ್ತಡ ಇರುವವರೂ ಅಷ್ಟೆ. ಪದೇ ಪದೇ ವೈದ್ಯರ ಬಳಿಗೆ ಹೋಗಿ ಐವತ್ತೋ ನೂರೋ ತೆತ್ತು ಬಿ.ಪಿ. ತಪಾಸಣೆ ಮಾಡಿಸುವ ಬದಲು ಡಿಜಿಟಲ್ ಬಿಪಿ ಮಾಪನವನ್ನು ಮನೆಯಲ್ಲಿ ಇಟ್ಟುಕೊಂಡರೆ ಯಾವಾಗ ಬೇಕೋ ಆಗ ಪರೀಕ್ಷಿಸಿಕೊಂಡು ಸಮಾಧಾನ ಪಡಬಹುದು.

ಹೆಚ್ಚಿನವರಿಗೆ ಪದೇ ಪದೇ ಪ್ರಯೋಗಾಲಯಕ್ಕೆ

**1938ರಲ್ಲಿ ಶಿಕಾಗೋದ ಆರೆಕ್ಸ್ ಕಂಪೆನಿ ಮೊಟ್ಟ ಮೊದಲ ಕಿವಿಗೆ ಅಳವಡಿಸುವಂತಹ ಹಿಯರಿಂಗ್ ಏಡ್ ತಯಾರಿಸಿತು.**